# ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ, ಬೆಂಗಳೂರು

## ಹೆಚ್.ಆರ್.ಸಿ ಸಂಖ್ಯೆ: 2297/10/16/2020-(SB-III)

## ದಿನಾಂಕ: 16–06–2022

## ಉಪಸ್ಥಿತರು: ಶ್ರೀ ಆರ್.ಕೆ ದತ್ತ ಮಾನ್ಯ ಸದಸ್ಯರು

**ದೂರುದಾರರು:**
ಶ್ರೀ ಮೊಹಮ್ಮದ್ ಹಸನ್ ಇರ್ಷಾದ್ ಗೂಡಾ
ಬಿನ್ ಮೊಹಮ್ಮದ್ ಇಸ್ಮಾಯಿಲ್ ಗೂಡಾ,
ಹುಸ್ಸೈನ್ ಮಂಜಿಲ್ ಮೈನ್‌ರೋಡ್,
ಮಾರುಕಟ್ಟೆ, ಭಟ್ಕಳ,
ಉತ್ತರ ಕನ್ನಡ ಜಿಲ್ಲೆ.

## ಆದೇಶ

ದೂರುದಾರರಾದ ಶ್ರೀ ಮೊಹಮ್ಮದ್ ಹಸನ್ ಇರ್ಷಾದ್ ಗೂಡಾ ರವರು ಸಲ್ಲಿಸಿರುವ ದೂರಿನಲ್ಲಿ ದಿನಾಂಕ 08.07.2020ರಂದು ರಾತ್ರಿ 7:30 ಗಂಟೆಗೆ ತನ್ನ ತಾಯಿಯವರ ಅನಾರೋಗ್ಯದ ಕಾರಣ ಮೆಡಿಸನ್ ತರಲು ಹೋದ ಸಂದರ್ಭದಲ್ಲಿ, ದೂರುದಾರರ ಮನೆಯ ಹತ್ತಿರ ಪೊಲೀಸ್ ಜೀಫ್ ನಿಂತಿದ್ದು, ಜೀಪಿನ ಡ್ರೈವರ್ (ಪೇದೆ) ಮನೆಗೆ ಹೋಗುವಂತೆ ದೂರುದಾರರಿಗೆ ಹೊಡೆದಿದ್ದು ಹಾಗೂ ಮತ್ತೊಂದು ಕಡೆಯಿಂದ ಪಿ.ಎಸ್.ಐ ಶ್ರೀ. ಭರತ್‌ಕುಮಾರ್ ರವರು ಯಾವುದೇ ಕಾರಣ ಇಲ್ಲದೇ ದೂರುದಾರರನ್ನು ರಕ್ತಸ್ರಾವವಾಗುವಂತೆ ಅಮಾನವೀಯವಾಗಿ ಲಾಠಿಯಿಂದ ಹಲ್ಲೆ ಮಾಡಿರುತ್ತಾರೆ. ಇದರ ಬಗ್ಗೆ ದೂರು ನೀಡಲು ದೂರುದಾರರೊಂದಿಗೆ ಅವರ ಸಹೋದರನು ಸಹ ಪೊಲೀಸ್ ಠಾಣೆಗೆ ಹೋದ ಸಂದರ್ಭದಲ್ಲಿ, ಪೊಲೀಸ್ ಸಿಬ್ಬಂದಿಗಳು ದೂರುದಾರರನ್ನು ಹಾಗೂ ಅವರ ಸಹೋದರರನ್ನು ಕೆಟ್ಟದಾಗಿ ನಿಂದನೆ ಮಾಡಿ, ಎ.ಎಸ್.ಐ ರಾಥೋರ್, ಕಾನ್ಸ್‌ಟೇಬಲ್ ಲೋಕೇಶ್ ಹಾಗೂ ಎ.ಎಸ್.ಐ ಶ್ರೀ ರಾಮಚಂದ್ರ ವೈದ್ಯ ರವರುಗಳು ದೂರುದಾರರೊಂದಿಗೆ ಒರಟಾಗಿ ನಡೆದುಕೊಂಡು ನಿಂದನೆ ಮಾಡಿ ಪೊಲೀಸ್ ಠಾಣೆಯಿಂದ ಹೊರ ಹೋಗುವಂತೆ ಬೆದರಿಕೆ ಹಾಕಿರುತ್ತಾರೆ. ದೂರುದಾರರ ಮೇಲೆ ಮಾಡಿದ ಹಲ್ಲೆಯಿಂದ ರಕ್ತಸ್ರಾವ ಆಗುತ್ತಿದ್ದರಿಂದ ದೂರುದಾರರು ಶಿರಾಲಿ ಸರ್ಕಾರಿ ಆಸ್ಪತ್ರೆಗೆ ಹೋಗಿ ಪ್ರಥಮ ಚಿಕಿತ್ಸೆ ಪಡೆದುಕೊಂಡಿದ್ದು, ಪರೀಕ್ಷೆ ಮಾಡಿದ ಡಾಕ್ಟರ್ ಹೆಚ್ಚಿನ ಚಿಕಿತ್ಸೆಗಾಗಿ ಮೇಲ್ದರ್ಜೆಯ ಆಸ್ಪತ್ರೆಯನ್ನು ಶಿಫಾರಸ್ಸು ಮಾಡಿರುತ್ತಾರೆ. ದೂರುದಾರರ ಹಿಮೋಗ್ಲೋಬಿನ್ ಲೆವೆಲ್ ಹಾಗೂ ಪ್ಲೇಟ್‌ಲೆಟ್ಸ್

ಲೆವೆಲ್ ಕಡಿಮೆಯಾಗಿರುತ್ತದೆ. ಆದ್ದರಿಂದ ತನಗೆ ನ್ಯಾಯವನ್ನು ಒದಗಿಸಿ ಪೊಲೀಸರ ಮೇಲೆ ಸೂಕ್ತ ಕ್ರಮ ಕೈಗೊಳ್ಳುವಂತೆ ಕೋರಿಕೊಂಡಿರುತ್ತಾರೆ.

ದೂರರ್ಜಿಯ ಪ್ರತಿಯನ್ನು ಪೊಲೀಸ್ ಅಧೀಕ್ಷಕರು, ಉತ್ತರ ಕನ್ನಡ ಜಿಲ್ಲೆ ರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ ಕಳುಹಿಸಿದ್ದು, ಅದರಂತೆ ದಿನಾಂಕ.20.10.2020ರ ಪತ್ರದನ್ವಯ ಪೊಲೀಸ್ ಅಧೀಕ್ಷಕರು, ಉತ್ತರ ಕನ್ನಡ ಜಿಲ್ಲೆ, ಕಾರವಾರ ರವರು ವರದಿಯನ್ನು ಸಲ್ಲಿಸಿದ್ದು, ವರದಿಯಲ್ಲಿ ದೂರರ್ಜಿಯ ಬಗ್ಗೆ ಎಎಸ್‌ಪಿ, ಭಟ್ಕಳ ನಗರ ಅವರು ಭಟ್ಕಳ ನಗರ ಪೊಲೀಸ್ ಠಾಣೆಯ ಪಿಎಸ್‌ಐ ಭರತ್‌ಕುಮಾರ್ ವಿ ಸಿಬ್ಬಂದಿಯವರಾದ 1) ಸೋಮರಾಜ ರಾಥೋಡ್, ಎಎಸ್‌ಐ ಭಟ್ಕಳ ನಗರ ಪೊಲೀಸ್ ಠಾಣೆ 2) ಸಿಪಿಸಿ–769, ಶ್ರೀ ಲೋಕಪ್ಪ ಕತ್ತಿ, ಭಟ್ಕಳ ನಗರ ಪೊಲೀಸ್ ಠಾಣೆ 3) ಶ್ರೀ ರಾಮಚಂದ್ರ ವೈದ್ಯ, ಎಎಸ್‌ಐ, ಭಟ್ಕಳ ನಗರ ಪೊಲೀಸ್ ಠಾಣೆ ರವರ ಹೇಳಿಕೆ ಪಡೆದುಕೊಂಡು ವಿಚಾರಣೆ ಮಾಡಿದ್ದರಲ್ಲಿ ಪಿಎಸ್‌ಐ ಭರತ್‌ಕುಮಾರ್ ವಿ ಭಟ್ಕಳ ನಗರ ಪೊಲೀಸ್ ಠಾಣೆ ಇವರು ಕೋವಿಡ್ 19 ಆದೇಶ ಉಲ್ಲಂಘಿಸಿದ್ದಕ್ಕೆ ಅರ್ಜಿದಾರರಾದ ಶ್ರೀ ಮೊಹಮ್ಮದ್ ಹಸನ್ ಇರ್ಷಾದ್ ಗುಡಾ, ಸಾ॥ ಭಟ್ಕಳ ಇವರ ಮೇಲೆ ಎಫ್‌ಐಆರ್ ದಾಖಲು ಮಾಡಿದ ವಿಷಯವನ್ನು ತಿಳಿದುಕೊಂಡು ಪೊಲೀಸ್ ಠಾಣೆಗೆ ಬಂದು ಪ್ರಶ್ನಿಸಿದ್ದು, ಅದಕ್ಕೆ ಪಿಎಸ್‌ಐ ರವರು ತನ್ನ ಕರ್ತವ್ಯ ತಾನು ಮಾಡಿರುತ್ತೇನೆಂದು ಹೇಳಿದ್ದಕ್ಕೆ ಪಿಎಸ್‌ಐ ರವರಿಗೆ ಏರುಧ್ವನಿಯಲ್ಲಿ ತನಗೆ ಏನು ಮಾಡಬೇಕು ಎಂದು ತಿಳಿದಿದೆ, ತಾನು ಏನು ಮಾಡುತ್ತೇನೆ ನೋಡು ಎಂದು ಹೇಳಿ ಪೊಲೀಸ್ ಠಾಣೆಯ ಮುಂದೆ ಕೂಗಾಡುತ್ತಿರುವಾಗ ಅರ್ಜಿದಾರರು ಅರ್ಜಿಯಲ್ಲಿ ನಮೂದಿಸಿರುವ ಎಎಸ್‌ಐ ರಾಥೋರ್ (ಸೋಮರಾಜ ರಾಥೋಡ್ ಎಎಸ್‌ಐ), ಕಾನ್‌ಸ್ಟೇಬಲ್ ಲೋಕೇಶ (ಲೋಕಪ್ಪ ಕತ್ತಿ ಕಾನ್‌ಸ್ಟೇಬಲ್), ರಾಮಚಂದ್ರ ವೈದ್ಯ, ಎಎಸ್‌ಐ ರವರು ಪೊಲೀಸ್ ಠಾಣೆಯ ಮುಂದೆ ಯಾಕೆ ಕೂಗುತ್ತಿದ್ದೀಯಾ ಅಂತಾ ಕೇಳಿದ್ದಕ್ಕೆ ಅವರಿಗೂ ಸಹ ಏರುಧ್ವನಿಯಲ್ಲಿ ಇಲ್ಲಸಲ್ಲದ ಮಾತನ್ನಾಡಿ ಜಗಳ ಮಾಡಿ ಹೋಗಿರುತ್ತಾರೆ.

ಅರ್ಜಿದಾರರು ಪಿಎಸ್‌ಐ ಶ್ರೀ ಭರತಕುಮಾರ್ ರವರು ಕರ್ತವ್ಯದಲ್ಲಿದ್ದ ಸಂದರ್ಭದಲ್ಲಿ ಅನುಚಿತವಾಗಿ ವರ್ತಿಸಿ ಪೊಲೀಸ್ ಕರ್ತವ್ಯಕ್ಕೆ ತೊಂದರೆ ಉಂಟು ಮಾಡಿರುತ್ತಾರೆ. ಅಲ್ಲದೇ ಉಪವಿಭಾಗದ ಎಲ್ಲಾ ಪೊಲೀಸ್ ಅಧಿಕಾರಿಯವರಿಗೆ ಕೊರೋನಾ ಸೋಂಕು ಹರಡದಂತೆ ನೋಡಿಕೊಳ್ಳಲು ಕಟ್ಟುನಿಟ್ಟಿನ ಆದೇಶವಿದ್ದು, ಯಾವುದೇ ಸ್ಥಳದಲ್ಲಿ ಜನ ಸುತ್ತಾಡಿದ ದೃಶ್ಯಗಳು ಕಂಡು ಬಂದಲ್ಲಿ ಮಾನ್ಯ ಜಿಲ್ಲಾಧಿಕಾರಿಯವರಿಗೆ ಹಾಗೂ ಮಾನ್ಯ ಪೊಲೀಸ್ ಅಧೀಕ್ಷಕರಿಗೆ ವಾಟ್ಸಪ್

ಮುಖಾಂತರ ಕಳುಹಿಸುತ್ತಿರುವುದರಿಂದ ಜನಸಾಮಾನ್ಯರವರಿಗೆ ಸಹಾಯವಾಗುವ ದೃಷ್ಟಿಯಿಂದ ಎಲ್ಲಾ ಅನುಕೂಲತೆಗಳನ್ನು ಕೂಡ ಮಾಡಿಕೊಡಲಾಗಿದ್ದರೂ ಕೂಡ ಸಕಾರಣವಿಲ್ಲದೇ ರಸ್ತೆಗೆ ಬಂದು ಗೊಂದಲ ಸೃಷ್ಟಿ ಮಾಡಿರುತ್ತಾರೆ. ಅರ್ಜಿದಾರರು ಗೊಂದಲ ಸೃಷ್ಟಿ ಮಾಡಿದ ಸ್ಥಳವು ಭಟ್ಕಳ ಹೃದಯ ಭಾಗವಾಗಿದ್ದು, ಅತಿಸೂಕ್ಷ್ಮ ಸ್ಥಳವಾಗಿರುತ್ತದೆ. ಈ ಸ್ಥಳದಲ್ಲಿ ಹೆಚ್ಚಿನ ಜನರು ಸೇರಿದ ನಂತರ ನಿಯಂತ್ರಿಸಲು ಕಷ್ಟಕರವಾಗಿರುತ್ತದೆ.

ಅರ್ಜಿದಾರರ ಮೇಲೆ ಭಟ್ಕಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ಸಂಖ್ಯೆ 98/2020 ಕಲಂ 269, 270, 336 ಐಪಿಸಿ ನೇದ್ದು ದಾಖಲಾಗಿದ್ದರಿಂದ ಅದೇ ಸಿಟ್ಟಿನಿಂದ ಪಿಎಸ್ಐ ಶ್ರೀ ಭರತಕುಮಾರ ಹಾಗೂ ಸಿಬ್ಬಂದಿಯವರ ಮೇಲೆ ಮನವಿ ಮಾಡಿಕೊಂಡಿರುತ್ತಾರೆ. ಮನವಿಯಲ್ಲಿ ನಮೂದಿಸಿದ ವಿಷಯವು ಸತ್ಯಕ್ಕೆ ದೂರವಾಗಿರುವುದರಿಂದ ವಿಲೇಗೆ ತರಲು ವಿಚಾರಣಾಧಿಕಾರಿಯವರು ಕೋರಿರುವ ವರದಿಯನ್ನು ಲಗತ್ತಿಸಿ ಪೊಲೀಸ್ ಅಧೀಕ್ಷಕರು, ಉತ್ತರ ಕನ್ನಡ, ಕಾರವಾರ ರವರು ವರದಿ ಸಲ್ಲಿಸಿದ್ದಾರೆ.

ತದನಂತರ, ದೂರುದಾರರು ದಿನಾಂಕ:21.10.2020ರ ಪತ್ರದನ್ವಯ ಮನವಿಯನ್ನು ಸಲ್ಲಿಸಿರುತ್ತಾರೆ. ಈ ಮನವಿಯ ವಿಷಯವು ದೂರರ್ಜಿಯಲ್ಲಿ ತಿಳಿಸಿರುವ ವಿಷಯ ಒಂದೇ ಆಗಿರುತ್ತದೆ ಮತ್ತು ಮುಂದುವರೆದು ಮನವಿಯಲ್ಲಿ ಪೊಲೀಸ್ ಅಧೀಕ್ಷಕರು, ಉತ್ತರ ಕನ್ನಡ ಜಿಲ್ಲೆ ರವರು ದೂರರ್ಜಿಗೆ ಸಂಬಂಧಿಸಿದಂತೆ ಭಟ್ಕಳ ಪೊಲೀಸ್ ಠಾಣೆಗೆ ವಿಚಾರಣೆ ಮಾಡಬೇಕಾಗಿ ಕಳುಹಿಸಿರುತ್ತಾರೆ. ಪಿ.ಎಸ್.ಐ ಶ್ರೀ ಭರತ್‌ಕುಮಾರ್ ಹಾಗೂ ತಮ್ಮ ಅಧೀನದಲ್ಲಿರುವ ಅಧಿಕಾರಿಗಳಿಗೆ ಅನುಕೂಲವಾಗುವಂತೆ ವಿಚಾರಾಣಾಧಿಕಾರಿಯವರು ಕನ್ನಡ ಕಂಪ್ಯೂಟರ್ ಟೈಪಿಂಗ್‌ನಲ್ಲಿ ತಯಾರಿಸಿದ ಹೇಳಿಕೆಗೆ ಸಹಿ ಹಾಕುವಂತೆ ತಿಳಿಸಿದ್ದು, ದೂರುದಾರರು ಸಹಿ ಹಾಕಿರುವುದಿಲ್ಲ. ಆದ್ದರಿಂದ ಪೊಲೀಸ್ ಅಧೀಕ್ಷಕರು, ಉತ್ತರ ಕನ್ನಡ ಜಿಲ್ಲೆ ರವರ ವರದಿಯನ್ನು ತಿರಸ್ಕರಿಸುವಂತೆ ದೂರುದಾರರು ಕೋರಿದ್ದಾರೆ.

ದೂರು ಮತ್ತು ಅದರೊಂದಿಗೆ ಲಗತ್ತಿಸಿರುವ ಪೋಟೋ ಪ್ರತಿ, ಶಿರಾಲಿ ಸಮುದಾಯ ಆರೋಗ್ಯ ಕೇಂದ್ರ ಹೊರರೋಗಿಗಳ ಚೀಟಿ, ಪೊಲೀಸ್ ಅಧೀಕ್ಷಕರು, ಉತ್ತರ ಕನ್ನಡ ಜಿಲ್ಲೆ ರವರ ವರದಿ ಹಾಗೂ ದೂರುದಾರರ ದಿನಾಂಕ:21.10.2020 ರ ಮನವಿಯನ್ನು ಪರಿಶೀಲಿಸಲಾಗಿ, ದೂರುದಾರರ ಮೇಲೆ ಹಲ್ಲೆ ಮಾಡಿರುವುದು ಪೋಟೋ ಪ್ರತಿಗಳಿಂದ ಮೇಲ್ನೋಟಕ್ಕೆ ಕಂಡು ಬರುವುದರಿಂದ ಸದರಿ ಪ್ರಕರಣವನ್ನು ಆಯೋಗದ ತನಿಖಾ ತಂಡದಿಂದ ಮರುವಿಚಾರಣೆ ನಡೆಸಲು ನಿರ್ಣಯಿಸಿ, ಸದರಿ ಪ್ರಕರಣಕ್ಕೆ

ಸಂಬಂಧಿಸಿದ ದೂರು, ವರದಿ ಮತ್ತು ದೂರುದಾರರ ದಿನಾಂಕ:21.10.2020 ರ ಪ್ರತಿಗಳನ್ನು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ (ಪ್ರಭಾರ), ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ ರವರಿಗೆ ಕಳುಹಿಸಿ, ಮರುವಿಚಾರಣಾ ವರದಿಯನ್ನು ಸ್ಪಷ್ಟ ಅಭಿಪ್ರಾಯ ಸಲ್ಲಿಸುವಂತೆ ಸೂಚಿಸಿದ್ದು, ಅದರಂತೆ ದಿನಾಂಕ.23.06.2021ರ ಪತ್ರದನ್ವಯ ಮರುವಿಚಾರಣಾ ವರದಿ ಹಾಗೂ ಅಡಕಗಳನ್ನು ಸಲ್ಲಿಸಿದ್ದು, ಅದರಂತೆ ದೂರುದಾರರು ಮಾಡಿರುವ ಆರೋಪಕ್ಕೆ ಸಂಬಂಧಿಸಿದಂತೆ ದೂರುದಾರರು ಮತ್ತು ಪ್ರತ್ಯಕ್ಷ ಸಾಕ್ಷಿದಾರರಾದ ಶ್ರೀ ಅಶಾಸ್ ಆಲಿ ಕೋಲಾ ಹಾಗೂ ಕು॥ ಹನಿಯಾ ಕೋಲಾ ರವರುಗಳ ಹೇಳಿಕೆಗಳು ಹಾಗೂ ದೂರುದಾರರು ಚಿಕಿತ್ಸೆ ಪಡೆದ ಶಿರಾಲಿಯ ಸಮುದಾಯ ಆರೋಗ್ಯ ಕೇಂದ್ರ, ಕುಂದಾಪುರದ ಚಿನ್ಮಯಿ ಆಸ್ಪತ್ರೆ ಹಾಗೂ ಭಟ್ಕಳದ ನಿಶಾತ್ ನರ್ಸಿಂಗ್ ಹೋಂನ ವೈದ್ಯಾಧಿಕಾರಿಗಳು ನೀಡಿರುವ ದಾಖಲಾತಿಗಳಿಂದ ದೂರುದಾರರಿಗೆ ಪಿ.ಎಸ್.ಐ ಶ್ರೀ ಭರತ್‌ಕುಮಾರ್ ಮತ್ತು ಪಿ.ಸಿ 754 ಕುಬೇರ್ ಹೊಸೂರ್ ರವರು ಹಲ್ಲೆ ಮಾಡಿರುವುದು ಕಂಡು ಬಂದಿರುತ್ತದೆಂದು ವರದಿ ಸಲ್ಲಿಸಿರುತ್ತಾರೆ. ಸದರಿ ವರದಿಯನ್ನು ದೂರುದಾರರ ಅಭಿಪ್ರಾಯಕ್ಕಾಗಿ ಕಳುಯಿಸಿದ್ದು, ಅದರಂತೆ ದೂರುದಾರರು ಅವರ ಅಭಿಪ್ರಾಯ ಸಲ್ಲಿಸಿದ್ದು, ಈ ಕೆಳಕಂಡಂತಿದೆ:

1. "ಈ ಮೇಲಿನ ಘಟನೆ ನಡೆಯುವ ಸಮಯದಲ್ಲಿ ಕೋವಿಡ್-19 ಸಾಂಕ್ರಾಮಿಕ ರೋಗವನ್ನು ಪರಿಣಾಮಕಾರಿಯಾಗಿ ತಡೆಗಟ್ಟುವ ಸಲುವಾಗಿ ಮಾನ್ಯ ರಾಜ್ಯ ಸರ್ಕಾರದ ಲಾಕ್‌ಡೌನ್ ಆದೇಶ ಜಾರಿಯಲ್ಲಿದ್ದುದ್ದರಿಂದ ಮಾನ್ಯ ಜಿಲ್ಲಾಧಿಕಾರಿಗಳು ದಿನಾಂಕ: 03-07-2020 ರಿಂದ ಮುಂದಿನ ಆದೇಶದವರೆಗೆ ಭಟ್ಕಳ ಪುರಸಭೆ ವ್ಯಾಪ್ತಿಗೆ ಸೀಮೀತವಾಗಿ ಸಂಜೆ 06-00 ಗಂಟೆಯಿಂದ ಮರುದಿನ ಬೆಳಿಗ್ಗೆ 06-00 ಗಂಟೆಯವರೆಗೆ ನಿಷೇಧಾಜ್ಞೆ ಆದೇಶವನ್ನು ಜಾರಿಮಾಡಿರುತ್ತಾರೆ ಎನ್ನುವುದು ಸುಳ್ಳು ಆಗಿರುತ್ತದೆ. ಮಾನ್ಯ ಉತ್ತರಕನ್ನಡ ಜಿಲ್ಲಾಧಿಕಾರಿಯವರು ದಿನಾಂಕ: 29-06-2000 (29-06-2020) ರಂದು ಕೋವಿಡ್-19 ಸಾಂಕ್ರಾಮಿಕ ರೋಗ ಹರಡದಂತೆ ತಡೆಗಟ್ಟಲು ಉತ್ತರಕನ್ನಡ ಜಿಲ್ಲೆಯಾದ್ಯಾಂತ ನಿಷೇಧಾಜ್ಞೆ ಹೊರಡಿಸಿದ್ದು, ಅದು ದಿನಾಂಕ: 05-07-2020 ರಿಂದ ದಿನಾಂಕ: 02-08-2020 ರವರೆಗೆ ಕೆಲವು ಚಟುವಟಿಕೆಗಳನ್ನು ನಿಷೇಧಿಸಿದ್ದು ಇರುತ್ತದೆ. ಅವುಗಳ ಪೈಕಿ ನಿಷೇಧಿತ ಅವಧಿಯಲ್ಲಿ ಸಾರ್ವಜನಿಕರು ವೈದ್ಯಕೀಯ ಕಾರಣಗಳಿಗೆ ಬಿಟ್ಟು ಇತರ ಯಾವುದೇ ಕಾರಣಕ್ಕೂ ಪ್ರತಿದಿನ (ಭಾನುವಾರ ಹೊರತುಪಡಿಸಿ) ರಾತ್ರಿ 08.00 ಗಂಟೆಯಿಂದ ಬೆಳಿಗ್ಗೆ 05-00 ಗಂಟೆಯವರಿಗೆ ಹೊರಗಡೆ ಸಂಚರಿಸತಕ್ಕದಲ್ಲ. ಹೀಗಿರುವಾಗ ಆರೋಪಿತರು ನನ್ನ ವಿರುದ್ದ ತಮ್ಮ ಠಾಣಾ ಮೊ.ಸಂಖ್ಯೆ: 98/2020 ಕಲಂ 269, 270, 336 ಐಪಿಸಿ ರೀತಿಯ ಪ್ರಕರಣ ದಾಖಲಿಸಿದ್ದು, ಆ ರೀತಿ ಪ್ರಕರಣ ದಾಖಲಿಸುವರೇ ಕಾನೂನಂತೆ ಬರಲಾರದು...
2. ಈ ಕೇಸಿನ ಆರೋಪಿತರಾದ ಶ್ರೀ ಭರತ್ ಕುಮಾರ ಮತ್ತು ಅವರ ಜೀಪ್ ಚಾಲಕರಾದ ಶ್ರೀ ಕುಬೇರ ಹೊಸುರು ರವರು ದಿನಾಂಕ: 08-07-2021 ರಂದು ರಾತ್ರಿ ಸುಮಾರು

07.30 ರ ಸಮಯದಲ್ಲಿ ಅನಾರೋಗ್ಯದಿಂದ ಬಳಲುತ್ತಿದ್ದ ನನ್ನ ತಾಯಿಗೆ ಔಷಧ ತೆಗೆದುಕೊಂಡು ನನ್ನ ಮನೆಗೆ ನನ್ನ ದ್ವಿ ಚಕ್ರ ವಾಹನದಲ್ಲಿ ಬರುತ್ತಿರುವಾಗ ನಮ್ಮ ಮನೆಯ ಮುಂದು ಪೋಲೀಸ್ ಜೀಪ್ ನಿಂತಿದ್ದು, ಸದ್ರಿ ಜೀಪಿನ ಡ್ರೈವರ್ ರವರು ಎಲ್ಲಿಗೆ ಹೋಗಿದ್ದೀಯಾ ಎಂದು ಕೇಳಲಾಗಿ, ನಾನು ಅವರಿಗೆ ನಿರ್ದಿಷ್ಠ ಕಾರಣ ತಿಳಿಸಿ ನನ್ನ ಮನೆಯ ಕಡೆ ಬೆರಳು ತೋರಿಸಿ ಇದೇ ನನ್ನ ಮನೆ ಎಂದು ತಿಳಿಸುತ್ತಿದ್ದಾಗ, ಇದ್ದಕ್ಕಿದ್ದಂತೆ ಸದ್ರಿಯವರು ನನಗೆ ಲಾಠಿಯಿಂದ ಹೊಡೆದಿದ್ದು ನನ್ನ ಹಿಂದಿನಿಂದ ಬಂದ ಶ್ರೀ ಭರತ್‌ಕುಮಾರ್ ಇವರು ನನಗೆ ದ್ವಿ ಚಕ್ರವಾಹನದಿಂದ ಇಳಿಯಲು ಅವಕಾಶ ನೀಡದೇ ಲಾಠಿಯಿಂದ ಮನಸೋ ಇಚ್ಛೆ ಥಳಿಸಿರುತ್ತಾರೆ.

ಆದರೆ ತಮ್ಮ ಮುಂದೆ ಆರೋಪಿತರಾದ ಭರತ್‌ಕುಮಾರ ಮತ್ತು ಶ್ರೀ ಕುಬೇರ ಹೊಸುರುವರು ತಮ್ಮ ಹೇಳಿಕೆಯಲ್ಲಿ ನಾನೇ ಬೈಕಿನಿಂದ ಬಿದ್ದು ಗಾಯವಾಗಿದೆ ಎಂದು ಹೇಳಿಕೆ ನೀಡಿದ್ದಾರೆ. ಸದ್ರಿಯವರು ಹೇಳಿಕೆಯು ಸುಳ್ಳು ಇರುತ್ತದೆ.

ನಾನು ನನಗಾದ ಹಲ್ಲೆಯ ಬಗ್ಗೆ ಈಗಾಗಲೇ ತಮಗೆ ಡಿ.ವಿ.ಡಿಯನ್ನು ಹಾಜರು ಪಡಿಸಿದ್ದು, ಅದರಲ್ಲಿ ಸದ್ರಿ ತಮ್ಮ ಅಭಿಪ್ರಾಯದಂತೆ ಅಲ್ಲಿ ಇಬ್ಬರು ವ್ಯಕ್ತಿಗಳು, ಒಬ್ಬ ವ್ಯಕ್ತಿಗೆ ಹೊಡೆಯುವುದು ಗೋಚರವಾಗುತ್ತದೆ. ಆದರೆ ಅದನ್ನು ಜೂಮ್ ಮಾಡಿ ನೋಡಿದರೇ ಅಲ್ಲಿ ಪೊಲೀಸ್ ಜೀಪ್ ನಿಂತಿರುವುದು ಸ್ಪಷ್ಟವಾಗಿರುತ್ತದೆ...

3. ಆರೋಪಿತರು ಹೇಳುವಂತೆ ದಿನಾಂಕ: 08-07-2021 ರಂದು ರಾತ್ರಿ 09-30 ಗಂಟೆ ಸಮಯದಲ್ಲಿ ನಾನು ಮತ್ತು ನನ್ನ ಭಾವನಾದ ಮೊಹಮ್ಮದ್ ಅನ್ಸಾರ್ ಅವರ ಜೊತೆ ಠಾಣೆಯ ಬಳಿ ಬಂದು ಏರು ಧ್ವನಿಯಲ್ಲಿ ಕೂಗಾಡಿ ಪೊಲೀಸ್ ಠಾಣೆಯ ಆವರಣದಲ್ಲಿ ಗೊಂದಲ ಸೃಷ್ಟಿಮಾಡಿದ್ದಾಗಲೀ, ನಾನು ಹಿಂದಿ ಭಾಷೆಯಲ್ಲಿ "ಕಹಾ ಹೈ ತುಮಾರಾ ಪಿ.ಎಸ್.ಐ ಉಸ್‌ಕ ಬಹುತ್ ದಾದಾಗಿರಿ ಹುಹಾ ಉಸ್‌ಲಿಯೇ ಉಸ್‌ಕೋ ಹಮ್ ನೇ ದಿಖಾನಾ ಹೈ, ಉಸ್ ಕೋ ದಿಖಾಕೋ ಚೋಡತೇ ಹೈ ಐಸೇ ಚೋಡುಂಗಾ ನಹೀ" ಎಂದು ಏರು ಧ್ವನಿಯಲ್ಲಿ ಹೇಳಿದ್ದಾಗಲಿ ಇರುವುದಿಲ್ಲ. ಬದಲಾಗಿ ನಾನು ಸದ್ರಿ ಘಟನೆಯ ಬಗ್ಗೆ ಫಿರ್ಯಾದಿ ನೀಡಲು ಅದೇ ದಿನ ರಾತ್ರಿ 08-15ರ ಸಮಯದಲ್ಲಿ ನನ್ನ ಭಾವನಾದ ಮೊಹಮ್ಮದ್ ಅನ್ಸಾರ್ ರವರೊಂದಿಗೆ ಭಟ್ಕಳ ನಗರ ಪೊಲೀಸ್ ಠಾಣೆಯ ಬಳಿ ಹೋದಾಗ, ಸದ್ರಿ ಪೋಲೀಸ್ ಠಾಣೆಯ ಆವರಣದಲ್ಲಿ ನಿಂತಿದ್ದ ಶ್ರೀ ಸೋಮರಾಜ್ ಟಿ. ರಾಥೋಡ್ ಎ.ಎಸ್.ಐ, ಶ್ರೀ ರಾಮಚಂದ್ರ ಜಿ ವೈದ್ಯ ಎ.ಎಸ್.ಐ ಹಾಗೂ ಶ್ರೀ ಲೋಕೇಶ ಕತ್ತಿ ಪಿ.ಸಿ-769 ರವರುಗಳು ನನ್ನನ್ನು ಹಾಗೂ ನನ್ನ ಭಾವನನ್ನು ತಡೆದು ನೀವು ಇಲ್ಲಿಗೆ ಏಕೆ ಬಂದಿದ್ದೀರಾ ಎಂದು ಪ್ರಶ್ನಿಸಿದ್ದು, ಅದಕ್ಕೆ ನಾನು ಪಿ.ಎಸ್.ಐ ಭರತ್ ಕುಮಾರ್ ಹಾಗೂ ಕುಬೇರ್ ಹಸೂರ್ ರವರ ವಿರುದ್ಧ ದೂರು ನೀಡಲು ಬಂದಿರುವುದಾಗಿ ತಿಳಿಸಿದಾಗ ಏಕಾಏಕಿ ನನ್ನನ್ನು ಹಾಗೂ ನನ್ನ ಭಾವರನ್ನು ಠಾಣೆಯಿಂದ ಹೊರಗೆ ಹೋಗಿ ಎಂದು ಲಾಠಿಯಿಂದ ಬೆದರಿಸಿ, ಅವಾಚ್ಯ ಶಬ್ಧಗಳಿಂದ ಜೋರಾಗಿ ಬೈದಿರುತ್ತಾರೆ. ಆಗ ಠಾಣೆಯ ಒಳಗಿದ್ದ ಪಿ.ಎಸ್.ಐ ಭರತ್ ಕುಮಾರ್.ವಿ ರವರು ಲಾಠಿ ತೆಗೆದುಕೊಂಡು ನನ್ನ ಬಳಿ ಬಂದು ಅವರೂ ಸಹ ನನಗೆ ಅವಾಚ್ಯ ಶಬ್ಧಗಳಿಂದ ನಿಂದಿಸಿ ಇವರನ್ನು ಬಿಡಬಾರದು ಎಂದು ಹೇಳಿರುತ್ತಾರೆ.

4. ನಾನು ಕುಂದಾಪುರದಲ್ಲಿರುವ ಚಿನ್ಮಯಿ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿ ಚಿಕಿತ್ಸೆ ಪಡೆದುಕೊಳ್ಳುತ್ತಿರುವಾಗ ಭಟ್ಕಳ ಶಹರ ಠಾಣಾ ಸಿ.ಪಿ.ಐ ಆಗಿರುವ ಶ್ರೀ ದಿವಾಕರ

ಪಿ.ಎಂ ರವರು ಸದ್ರಿ ಆಸ್ಪತ್ರೆಗೆ ದಿನಾಂಕ: 10-07-2020 ರಂದು ಬೆಳಿಗ್ಗೆ ಸುಮಾರು 09.30 ಬೇಟಿ ನೀಡಿದ್ದು, ನಾನು ಘಟನೆಯ ಬಗ್ಗೆ ವಿವರಿಸಿದ್ದು, ಅವರು ಕೈ ಬರಹದಲ್ಲಿ ಫಿರ್ಯಾದಿ ನೀಡುವಂತೆ ತಿಳಿಸಿದ್ದು ಇರುತ್ತದೆ. ಆದರೆ ನನಗೆ ಬಲಗೈಗೆ ಬ್ಯಾಂಡೇಜ್ ಸುತ್ತಿದ್ದರಿಂದ, ನಾನು ನನ್ನ ಬಾವನವರ ಕೈಯಿಂದ ನನ್ನ ಹೇಳಿಕೆಯಂತೆ ಬರೆಯಿಸಿ, ಸದ್ರಿ ಪೋಲೀಸ್ ಸರ್ಕಲ್ ಇನ್ಸ್‌ಪೆಕ್ಟರ್‌ಗೆ ನೀಡಿದ್ದು, ಅವರು ಅದನ್ನು ಸ್ವೀಕರಿಸಿ, ನನಗೆ ಸ್ವೀಕೃತಿಯನ್ನ ನೀಡಿದ್ದು ಇರುತ್ತದೆ. ಆದರೆ ಸದ್ರಿ ಸಿ.ಪಿ.ಐ ನವರು ನನ್ನ ಫಿರ್ಯಾದನ್ನು ದಾಖಲಿಸಿಕೊಂಡಿದ್ದಾಗಲೀ, ಎಫ್.ಐ.ಆರ್ ಮಾಡಿದ್ದಾಗಲೀ, ಇರುವುದಿಲ್ಲ. ಅವರ ತಮ್ಮ ಸಹದ್ಯೋಗಿಯನ್ನು ಉಳಿಸಲು ತಮ್ಮ ಕಾನೂನಿನ ಪ್ರಕಾರ ಕರ್ತವ್ಯ ನಿರ್ವಹಿಸುವಲ್ಲಿ ನಿರ್ಲಕ್ಷ ತೋರಿರುತ್ತಾರೆ. ಅಲ್ಲದೇ ಆ ಬಗ್ಗೆ ಯಾವುದೇ ತನಿಖೆಯನ್ನು ಸಹ ಮಾಡಿದ್ದು ಇರುವುದಿಲ್ಲ.

5. ಅಲ್ಲದೇ ಸದ್ರಿ ಸಿ.ಪಿ.ಐ ಭಟ್ಕಳ ರವರು ತಮ್ಮ ಕಛೇರಿಯ ಎಲ್.ಪಿಟಿಷನ್ ನಂ.9/2020 ರ ದೂರನ್ನು ವಿಲೆವಾರಿ ಮಾಡಿರುವ ಬಗ್ಗೆ ಮುರ್ಡೇಶ್ವರ ಪೊಲೀಸ್ ಠಾಣಾ ಸಿಬ್ಬಂದಿಯಾದ ಶ್ರೀ ಗಣೇಶ ನಾರಾಯಣ ಗಾವಕರ್ ಸಿ.ಎಚ್.ಸಿ 1484 ಇವರು ಹಿಂಬರಹದ ಪ್ರತಿಯನ್ನು ನನಗೆ ಜಾರಿ ಮಾಡಲು ಬಂದಾಗ ನಾನು ಅದನ್ನು ಸ್ವೀಕರಿಸಲು ನಿರಾಕರಿಸುತ್ತೇನೆ ಎನ್ನುವ ಸಂಗತಿ ಕೂಡ ಸುಳ್ಳು ಇರುತ್ತದೆ. ಆದರೆ ಆಕ್ಟೋಬರ್-2020 ತಿಂಗಳಿನಲ್ಲಿ ಪೊಲೀಸ್ ಸರ್ಕಲ್ ಇನ್ಸ್‌ಪೆಕ್ಟರ್ ದಿವಾಕರ ರವರು ನನಗೆ ಅವರ ಮೊಬೈಲ್ ನಂ.9480805232 ನಿಂದ ನನ್ನ ಮೊಬೈಲ್ ನಂ.9035660474 ಗೆ ಕರೆ ಮಾಡಿ ನಿಮ್ಮ ಹೇಳಿಕೆಯನ್ನು ಪಡೆಯಬೇಕಾಗಿತ್ತು. ನೀವು ಭಟ್ಕಳ ನಗರ ಪೊಲೀಸ್ ಠಾಣೆಗೆ ಬನ್ನಿ ಎಂದು ತಿಳಿಸಿದ ಮೇರೆಗೆ ನಾನು ಭಟ್ಕಳ ನಗರ ಪೋಲೀಸ್ ಠಾಣೆಗೆ ತೆರಳಿದಾಗ ನಾನು ಮಾನ್ಯ ಆಯೋಗದಲ್ಲಿ ನೀಡಿರುವ ದೂರಿನ ಬಗ್ಗೆ ತಿಳಿಸಿ ಸದ್ರಿ ದೂರನ್ನು ಸ್ವೀಕರಿಸಿದ ಮಾನ್ಯ ಅಯೋಗವು ಸದ್ರಿ ದೂರಿನಲ್ಲಿರುವ ಅಂಶಗಳ ಬಗ್ಗೆ ತನಿಖೆ ನಡೆಸಿ ವರದಿ ನೀಡುವಂತೆ ಪೋಲೀಸ್ ಅಧೀಕ್ಷಕರು, ಉತ್ತರ ಕನ್ನಡ ಜಿಲ್ಲೆ ರವರಿಗೆ ಕಳುಹಿಸಿದ್ದು, ಸದ್ರಿ ಎಸ್.ಪಿ ರವರು ಸದ್ರಿ ದೂರನ್ನು ಸೂಕ್ತ ಕ್ರಮಕ್ಕಾಗಿ ಭಟ್ಕಳ ನಗರ ಪೋಲೀಸ್ ಠಾಣೆಗೆ ಕಳುಹಿಸಿರುತ್ತಾರೆಂದು ತಿಳಿಸಿ ಹೇಳಿಕೆ ನೀಡುವಂತೆ ತಿಳಿಸಿರುತ್ತಾರೆ. ನಂತರ ಅವರ ಕನ್ನಡದಲ್ಲಿ ಏನನ್ನೋ ಟೈಪ್ ಮಾಡಿ ನನ್ನ ಸಹಿಯನ್ನು ಮಾಡುವಂತೆ ಹೇಳಿದರು. ಆಗ ನಾನು ಅದು ಕನ್ನಡ ಬಾಷೆಯಲ್ಲಿದ್ದುದ್ದರಿಂದ ನನ್ನ ಭಾವನಿಗೆ ತೋರಿಸಿಕೊಂಡು ಬಂದು ನಂತರ ಸಹಿ ಮಾಡುತ್ತೇನೆಂದು ತಿಳಿಸಿ ಸದ್ರಿ ಹೇಳಿಕೆಯನ್ನು ತೆಗೆದುಕೊಂಡು ಹೋಗಿ ನನ್ನ ಭಾವ ಹಾಗೂ ನಮಗೆ ಪರಿಚಯವಿರುವ ಲಾಯರ್ ಒಬ್ಬರಿಗೆ ತೋರಿಸಿದಾಗ ಅದರಲ್ಲಿ ನಾನು ನನ್ನನ್ನು ಲಾಠಿಯಿಂದ ಹೊಡೆದು ಅವಾಚ್ಯ ಶಬ್ಧಗಳಿಂದ ಬೈದಿರುವ ಪಿ.ಎಸ್.ಐ ಶ್ರೀ ಭರತ್ ಕುಮಾರ ಹಾಗೂ ಅವರ ಸಿಬ್ಬಂದಿಗಳೊಂದಿಗೆ ರಾಜಿ ಮಾಡಿಕೊಳ್ಳುತ್ತಿರುವುದಾಗಿ ನಮೂದಿಸಿರುವುದಾಗಿ ತಿಳಿಸಿದ ಮೇರೆಗೆ ನಾನು ಸಹಿ ಮಾಡಲು ನಿರಾಕರಿಸಿರುತ್ತೇನೆ. ಇಲ್ಲು ಕೂಡ ಸದರಿ ಸಿ.ಪಿ.ಐ ನವರು ತನ್ನ ಸಹದ್ಯೋಗಿಗೆ ಸಹಾಯ ಮಾಡಲು ಸುಳ್ಳು ಹೇಳಿಕೆಯನ್ನು ಸೃಷ್ಟಿಸಿ ತನಿಖೆಯ ದಾರಿ ತಪ್ಪಿಸುವ ಕೆಲಸವನ್ನು ಮಾಡಿದ್ದು, ತನ್ನ ಕಾನೂನಾತ್ಮಕ ಕರ್ತವ್ಯ ನಿರ್ವಹಿಸಲು ನಿರ್ಲಕ್ಷ ತೋರಿರುತ್ತಾರೆ. ಕಾರಣ ಸದ್ರಿ ಸಿಪಿಐ

ವಿರುದ್ಧ ಕೂಡ ಕಾನೂನಾತ್ಮಕ ಕರ್ತವ್ಯ ನಿರ್ಲಕ್ಷಿಸಿರುವ ಬಗ್ಗೆ ಸೂಕ್ತ ಕಾನೂನು ಜರುಗಿಸಬೇಕಾಗಿ ವಿನಂತಿ."

ದೂರು, ವರದಿ, ಮರು ವಿಚಾರಣಾ ವರದಿ ಹಾಗೂ ಅಭಿಪ್ರಾಯವನ್ನು ಪರಿಶೀಲಿಸಲಾಗಿ, ದೂರುದಾರರಿಗೆ ಪಿ.ಎಸ್.ಐ ಶ್ರೀ ಭರತ್‌ಕುಮಾರ್ ಮತ್ತು ಪಿ.ಸಿ 754 ಕುಬೇರ್ ಹೊಸೂರ್ ರವರು ಹಲ್ಲೆ ಮಾಡಿರುವುದು ಕಂಡು ಬಂದಿರುವುದರಿಂದ ಈ ಬಗ್ಗೆ ಹೇಳುವುದೇನಾದರೂ ಇದ್ದಲ್ಲಿ ದಿನಾಂಕ 17-01-2022 ರಂದು 12:00 ಗಂಟೆಗೆ ಆಯೋಗದ ಮುಂದೆ ಖುದ್ದು ಹಾಜರಾಗಿ ಲಿಖಿತ ಸಮಜಾಯಿಷಿಯನ್ನು ಸಲ್ಲಿಸುವಂತೆ ಶ್ರೀ ಭರತ್‌ಕುಮಾರ್, ಪೊಲೀಸ್ ಸಬ್ ಇನ್ಸ್‌ಪೆಕ್ಟರ್, ಭಟ್ಕಳ ನಗರ ಪೊಲೀಸ್ ಠಾಣೆ ಹಾಗೂ ಪೊಲೀಸ್ ಪೇದೆ ಶ್ರೀ ಕುಬೇರ್ ಪೇದೆ ಸಂ. 754, ಭಟ್ಕಳ ನಗರ ಪೊಲೀಸ್ ಠಾಣೆ ರವರಿಗೆ ಪಿ.ಹೆಚ್.ಆರ್ ಆಕ್ಟ್ 1993 ಕಲಂ 16ರ ಅಡಿ ಕಾರಣ ಕೇಳುವ ನೋಟೀಸ್ ನೀಡಿದ್ದು, ಹಾಗೂ ಸದರಿ ದಿನಾಂಕದಂದು ಆಯೋಗದ ಮುಂದೆ ವಿಚಾರಣೆಗೆ ಹಾಜರಾಗುವಂತೆ ದೂರುದಾರರಾದ ಶ್ರೀ ಮೊಹಮ್ಮದ್ ಹಸನ್ ಇರ್ಷಾದ್ ಗೂಡಾ ರವರಿಗೆ ಸೂಚಿಸಿದ್ದು, ಅದರಂತೆ ದಿನಾಂಕ.17.01.2022 ರಂದು ದೂರುದಾರರಾದ ಶ್ರೀ ಮೊಹಮ್ಮದ್ ಹಸನ್ ಇರ್ಷಾದ್ ಗೂಡಾ ರವರು ಅವರ ಸೋದರ ಮಾವ ರವರಾದ ಶ್ರೀ ಮೊಹಮ್ಮದ್ ಅನ್ಸಾರ್ ರವರೊಂದಿಗೆ ಆಯೋಗದ ಮುಂದೆ ಹಾಜರಾಗಿ, ದೂರುದಾರರು ಅವರ ಹೇಳಿಕೆಯನ್ನು ನೀಡಿರುತ್ತಾರೆ. ಶ್ರೀ ಭರತ್‌ಕುಮಾರ್, ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಹಾಗೂ ಪೊಲೀಸ್ ಪೇದೆ ಶ್ರೀ ಕುಬೇರ್ ಪೇದೆ ಸಂ. 754, ಭಟ್ಕಳ ನಗರ ಪೊಲೀಸ್ ಠಾಣೆ ರವರುಗಳು ಕೋವಿಡ್-19 ಬಂದೋಬಸ್ತ್ ಕರ್ತವ್ಯದ ನಿಮಿತ್ತವಾಗಿ ನಿಯೋಜಿಸಿದ್ದರಿಂದ, ಮತ್ತೊಂದು ದಿನಾಂಕವನ್ನು ಕೋರಿರುತ್ತಾರೆ.

ದಿನಾಂಕ.17.01.2022 ರಂದು ದೂರುದಾರರು ಆಯೋಗದ ಮುಂದೆ ಹಾಜರಾಗಿ ನೀಡಿದ ಹೇಳಿಕೆಯು ಕೆಳಕಂಡಂತೆ ಇದೆ:

"On 08-07-2020 I was in my sisters house in Bhatkal, I got a call from my cousin sister Haniya who told me to get medicine for my mother. It was around 7.00 P.M. Then I went to the concerned Doctor and got the medicine and later while going back to my house, right outside of my house, there was a police jeep. As I reached my house he asked me why I am here at that time? It was 7.30 P.M. then, I pointed my finger at my house but he

did not listen anything and he hit me with his lathi and told me to move to my house. Then suddenly from the other side P.S.I Sri. Bharath Kumar of Bhatkal Town Police station started hitting him with his lathi, very mercilessly. I could not stand with my bike. Then my cousin brother, Ashaf Ali Kola came and enquired, what is happening? P.S.I Sri. Bharath Kumar threatened him and Ashaf Ali Kola ran inside the house.

Thereafter, the P.S.I. Sri. Bharath Kumar did not allow me to enter my house. So, I took my bike and went to my sister's place.

My right thumb, was bleeding. I had sustained injury on my thigh Then from sister's house my brother-in-law Sri. Mohammed Ansar came along with me to lodge a complaint regarding assault on me in Bhatkal Town Police station.

At the Police station, police constable whose name I came to know later as Sri. Lokesh Katti enquired from us as to against whom we have to lodge the complaint. When I pointed out towards Police Constable Sri. Kubera Hosur who was standing outside and the P.S.I. Sri. Bharath Kumar, Sri. Lokesh Kumar, pushed us outside the Police Station, abusively.

At that time all the police persons inside the police station came outside, surrounded us and started abusing us.

Sri. Bharath Kumar also came outside at that time along with lathi and abused us. An A.S.I. namely Sri. Somshekar T. Rathod was also telling Sri. Divakar, C.P.I Bhatkal that we should not be spared.

Thereafter, post 9.00 P.M. we went to Shirali Government Hospital. At the Government Hospital, I mentioned the assault on me by the Police Officers of Bhatkal Town Police, and got treatment. The M.L.C.

provided is before the Commission and copy of it is retained.

As that time Covid-19 cases was large in Government Hospital. Therefore on advice, we went to the Chinmayi Hospital in Kundapura for further treatment. At Chinmayi Hospital further examination and M.R.I was done and on the suggestion of Chinmayi Hospital Doctor, thereafter I was sent to K.M.C Hospital at Mangalore but due to prevalence of large number of Covid-19 cases, the Doctor suggested us to go to Bhatkal at the Nishad Nursing Home.

Finally at Nishad Nursing Home I was admitted and took treatment for three days and thereafter I was on bed rest for three months. I may mention that due to the assault my blood platelets level had fallen drastically and I had to be given blood platelet drip.

I may mention that C.P.I Sri. Divakar along with two constable visited me at Chinmayi Hospital, where I was undergoing treatment and my brother-in-law, Sri. Mohammed Ansar had given complaint about the assault by the police persons. However, neither the C.P.I nor anyone took any action on this complaint."

ಮುಂದುವರೆದು, ಶ್ರೀ ಭರತ್‌ಕುಮಾರ್, ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಹಾಗೂ ಪೊಲೀಸ್ ಪೇದೆ ಶ್ರೀ ಕುಬೇರ್ ಪೇದೆ ಸಂ. 754, ಭಟ್ಕಳ ನಗರ ಪೊಲೀಸ್ ಠಾಣೆ, ಸಿಪಿಐ ಶ್ರೀ ದಿವಾಕರ್ ಹಾಗೂ ಎ.ಎಸ್.ಪಿ ಶ್ರೀ ನಿಖಿಲ್ ರವರುಗಳನ್ನು ದಿನಾಂಕ.02.03.2022ರಂದು ಆಯೋಗಕ್ಕೆ ಹಾಜರಾಗುವಂತೆ ಸೂಚಿಸಿದ್ದು, ದಿನಾಂಕ.02.03.2022ರಂದು ದೂರುದಾರರು, ಶ್ರೀ ಭರತ್‌ಕುಮಾರ್, ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಹಾಗೂ ಪೊಲೀಸ್ ಪೇದೆ ಶ್ರೀ ಕುಬೇರ್ ಪೇದೆ ಸಂ. 754, ಭಟ್ಕಳ ನಗರ ಪೊಲೀಸ್ ಠಾಣೆ ರವರಿಬ್ಬರು ಆಯೋಗದ ಮುಂದೆ ಹಾಜರಾಗಿ, ಶ್ರೀ ಭರತ್‌ಕುಮಾರ್ ಹಾಗೂ ಶ್ರೀ ಕುಬೇರ್ ರವರು ಅವರುಗಳ ಹೇಳಿಕೆಗಳನ್ನು ನೀಡಿರುತ್ತಾರೆ. ದೂರುದಾರರು ಅವರ ಪಾಟೀ ಸವಾಲನ್ನು ನೀಡಿರುತ್ತಾರೆ. ಆದರೆ ಸಿಪಿಐ ಶ್ರೀ ದಿವಾಕರ್ ಹಾಗೂ ಎ.ಎಸ್.ಪಿ ಶ್ರೀ ನಿಖಿಲ್ ರವರುಗಳು ತಮ್ಮ ಕರ್ತವ್ಯದ ನಿಮಿತ್ತ ಹಾಜರಾಗಿರುವುದಿಲ್ಲ.

ದಿನಾಂಕ.02.03.2022 ರಂದು ಆಯೋಗದ ಮುಂದೆ ಶ್ರೀ ಭರತ್‌ಕುಮಾರ್, ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ರವರು ಹಾಜರಾಗಿ ತಮ್ಮ ಹೇಳಿಕೆಯನ್ನು ನೀಡಿರುತ್ತಾರೆ.

"ದಿನಾಂಕ.08.07.2020ರಂದು ಸಂಜೆ 6 ಗಂಟೆಯಿಂದ ಬೆಳಿಗ್ಗೆ 6 ಗಂಟೆಯವರೆವಿಗೂ ಭಟ್ಕಳ ಪುರಸಭೆಯಲ್ಲಿ ಕೋವಿಡ್-19 ಸಾಂಕ್ರಾಮಿಕ ರೋಗದ ಕುರಿತು ಸರ್ಕಾರ ಹೊರಡಿಸಿರುವ ನಿಷೇದಾಜ್ಞೆ ಆದೇಶ ಜಾರಿಯಲ್ಲಿತ್ತು. ಸುಮಾರು ಸಂಜೆ 5.30 ರಿಂದ 7.40ರ ಸಮಯದಲ್ಲಿ ಭಟ್ಕಳದ ಮಾರಿಕಾಂಬ ದೇವಸ್ಥಾನದ ಹತ್ತಿರ ಪೆಟ್ರೋಲಿಂಗ್ ಗಸ್ತಿನಲ್ಲಿದ್ದಾಗ ಶ್ರೀ ಮೊಹಮ್ಮದ್ ಹಸನ್ ಇರ್ಷಾದ್ ಗುಡಾ ಎಂಬ ಒಬ್ಬ ವ್ಯಕ್ತಿ ಬೈಕ್‌ನಲ್ಲಿ ಓಲ್ಡ್ ಬಸ್ ಸ್ಟಾಂಡ್ ರೋಡ್‌ನಿಂದ ಮಾರಿಕಾಂಬ ದೇವಸ್ಥಾನದ ಕಡೆಗೆ ಮಾಸ್ಕ್ ಇಲ್ಲದೆ ಬೈಕ್‌ನಲ್ಲಿ ಒಬ್ಬ ವ್ಯಕ್ತಿ ಹೋಗುತ್ತಿರುವುದನ್ನು ತಡೆದು ಗಾಡಿಯನ್ನು ನಿಲ್ಲಿಸಿ, ಏಕೆ ಕರ್ಫ್ಯೂ ಸಮಯದಲ್ಲಿ ಹೊರಗಡೆ ಓಡಾಡುತ್ತಿದ್ದೀರಿ ಮತ್ತು ಮಾಸ್ಕ್ ಧರಿಸಿರುವುದಿಲ್ಲವೆಂದು ಕೇಳಿದಾಗ, ಆತ ಅದಕ್ಕೆ ನಾವು ಭಟ್ಕಳದಲ್ಲಿ ಹೇಗೆ ಬೇಕಾದರೂ ಸಂಚರಿಸುತ್ತೇವೆ ನೀವು ಪೊಲೀಸರು ಅಡ್ಡಿಪಡಿಸುವಂತಿಲ್ಲವೆಂದು ಉಡಾಫೆಯಿಂದ ಮಾತನಾಡಿದ. ಅದಕ್ಕೆ ನಾನು ಇಲ್ಲಿಂದ ಹೋಗು ಎಂದು ಹೇಳಿ ಅವನ ಬೈಕ್ ಹಿಂಬದಿಗೆ ಲಾಠಿಯಿಂದ ಹೊಡೆದೆ, ಅದಕ್ಕೆ ಆತನು ಇನ್ನಷ್ಟು ಉಡಾಫೆಯಿಂದ ಮಾತನಾಡಿದ್ದಕ್ಕೆ ಅವನಿಗೆ 2 ಏಟು ಹೊಡೆದಿದ್ದೇನೆ. ನಂತರ ಆತನು ಗಾಡಿಯನ್ನು ತೆಗೆದುಕೊಂಡು ಹೋಗಿ ಮುಂದೆ ಬಿದ್ದು ಅಲ್ಲಿಂದ ಎದ್ದು ಹೋಗುತ್ತಿದ್ದಾಗ ಅಲ್ಲೆ ಇದ್ದ ಆತನ ಸಂಬಂಧಿಕರಾದ ಅರ್ಷದ್ ಅಲಿ ಕೂಲ ರವರು ಮೊಹಮ್ಮದ್ ಹಸನ್‌ನನ್ನು ಏನಾಗಿದೆ ಎಂದು ವಿಚಾರಿಸದೇ ಹೋಗಿಬಿಟ್ಟರು.

ನಂತರ ನಾವು ಪೆಟ್ರೋಲಿಂಗ್ ಗಸ್ತು ನಡೆಸಿ, ಠಾಣೆಗೆ ವಾಪಸ್ ಆಗಿರುತ್ತೇವೆ. ನಂತರ ಮೊಹಮ್ಮದ್ ಅನ್ಸರ್ ಎಂಬ ಒಬ್ಬ ವ್ಯಕ್ತಿ ಠಾಣೆಗೆ ಬಂದು ಪೊಲೀಸರಿಗೆ ಅವಾಚ್ಯ ಶಬ್ದಗಳಿಂದ ಬೈದು ನಿಂದಿಸುತ್ತಿದ್ದರು, ಅದಕ್ಕೆ ನಾವು ಈ ಕುರಿತು ಏಕೆ ಪೊಲೀಸರನ್ನು ಅವಾಚ್ಯ ಶಬ್ದಗಳಿಂದ ಬೈದು ನಿಂದಿಸುತ್ತೀದ್ದೀರಾ ಎಂದು ಕೇಳಿರುತ್ತೇವೆಯೇ ಹೊರತು, ಅವರನ್ನು ಹೆದರಿಸಲು ನಾವು ಅವರಿಗೆ ಲಾಠಿಯಿಂದ ಹೊಡೆದಿರುತ್ತೇವೆ ಎಂದು ಅವರು ಹೇಳಿರುವುದು ನಿಜವಲ್ಲ. ಮೊಹಮ್ಮದ್ ಅನ್ಸರ್ ಪೊಲೀಸರಿಗೆ ಅವಾಚ್ಯ ಶಬ್ದಗಳಿಂದ ಬೈಯ್ಯುತ್ತಿದ್ದಾಗ ಶ್ರೀ ದಿವಾಕರ್ ಸಿಪಿಐ ಕೂಡ ಬಂದರು. ಆದರೆ ನಾನು ಮೊಹಮ್ಮದ್ ಅನ್ಸರ್‌ಗೆ ಹೊಡೆಯಲಿಲ್ಲ. ನಂತರ ಮೊಹಮ್ಮದ್ ಅನ್ಸರ್ ಅಲ್ಲಿಂದ ಹೊರಟು ಹೋದರು.

ದಿನಾಂಕ.02.03.2022 ರಂದು ಆಯೋಗದ ಮುಂದೆ ಶ್ರೀ ಕುಬೇರ್ ಪೇದೆ ಸಂ. 754, ಭಟ್ಕಳ ನಗರ ಪೊಲೀಸ್ ಠಾಣೆ ರವರು ಹಾಜರಾಗಿ ತಮ್ಮ ಹೇಳಿಕೆಯನ್ನು ನೀಡಿರುತ್ತಾರೆ:

ನಾನು ಭಟ್ಕಳ ನಗರ ಪೊಲೀಸ್ ಠಾಣೆ, ಉತ್ತರ ಕನ್ನಡ ಜಿಲ್ಲೆಯಲ್ಲಿ ಪೊಲೀಸ್ ಪೇದೆಯಾಗಿ(ಡ್ರೈವರ್‌ಆಗಿ)27.10.2016ರಿಂದ ದಿನಾಂಕ.21.06.2021 ರವರೆಗೂ ಕಾರ್ಯನಿರ್ವಹಿಸಿದ್ದೇನೆ. ಪ್ರಸ್ತುತ ಈಗ ದಿನಾಂಕ.21.06.2021 ರಿಂದ ಇಲ್ಲಿಯವರೆಗೂ ಹಳಿಯಾಳ ಪೊಲೀಸ್ ಠಾಣೆ, ಉತ್ತರ ಕನ್ನಡ ಜಿಲ್ಲೆ ಇಲ್ಲಿ ಪೊಲೀಸ್ ಪೇದೆಯಾಗಿ(754) ಆಗಿ ಕಾರ್ಯ ನಿರ್ವಹಿಸುತ್ತಿದ್ದೇನೆ.

ಭಟ್ಕಳ ನಗರ ಪೊಲೀಸ್ ಠಾಣೆ, ಉತ್ತರ ಕನ್ನಡ ಜಿಲ್ಲೆಯಲ್ಲಿ ಪಿ.ಎಸ್.ಐ ಶ್ರೀ ಭರತ್ ಕುಮಾರ್ ರವರ ಡ್ರೈವರ್ ಆಗಿ ಕಾರ್ಯ ನಿರ್ವಹಿಸಿದ್ದೇನೆ. ದಿನಾಂಕ.08.07.2020 ರಂದು ನಾನು ಮತ್ತು ಪಿ.ಎಸ್.ಐ ಶ್ರೀ ಭರತ್ ಕುಮಾರ್ ರವರ ಜೊತೆ ಪೊಲೀಸ್ ಜೀಪ್‌ನಲ್ಲಿ ಡ್ರೈವರ್ ಆಗಿ ಪೆಟ್ರೋಲಿಂಗ್ ಗಸ್ತು ಕರ್ತವ್ಯಕ್ಕೆಂದು ಹೋಗಿದ್ದೆವು. ಆಗ ಮಾರಿಕಾಂಬ ದೇವಸ್ಥಾನದ ಹತ್ತಿರ ಬರುತ್ತಿದ್ದ ಜನರಿಗೆ ಪಿ.ಎಸ್.ಐ ಶ್ರೀ ಭರತ್ ಕುಮಾರ್ ರವರು ವಿಚಾರಣೆ ಮಾಡುತ್ತಿದ್ದರು. ಆಗ ಒಬ್ಬ ವ್ಯಕ್ತಿ ಬೈಕ್ ನಿಂದ ಬರುತ್ತಿದ್ದು ಮಾಸ್ಕ್ ಧರಿಸದೇ ಬರುತ್ತಿದ್ದನ್ನು ನೋಡಿ ಅವನನ್ನು ವಿಚಾರಣೆ ಮಾಡುತ್ತಿದ್ದರು. ಈ ದಿನ ನನ್ನ ಮುಂದೆ ಕುಳಿತುಕೊಂಡಿರುವ ಶ್ರೀ ಮೊಹಮ್ಮದ್ ಹಸನ್ ಇರ್ಷಾದ್ ಗುಡಾ ಈ ವ್ಯಕ್ತಿಯೇ ಆ ದಿನ ಬೈಕ್‌ನಲ್ಲಿ ಮಾಸ್ಕ್ ಧರಿಸದೇ ಬರುತ್ತಿದ್ದ ವ್ಯಕ್ತಿ. ಇವರು ಕೋವಿಡ್–19 ಸಾಂಕ್ರಾಮಿಕ ರೋಗದ ಕರ್ಫ್ಯೂ ಇದ್ದದ್ದರಿಂದ ಕರ್ಫ್ಯೂ ನಿಯಮಗಳನ್ನು ಉಲ್ಲಂಘಿಸಿ ಪಿ.ಎಸ್.ಐ ಶ್ರೀ ಭರತ್ ಕುಮಾರ್ ರವರಿಗೆ ಶ್ರೀ ಹಸನ್ ಇರ್ಷಾದ್ ಗುಡಾ ರವರು ಉಡಾಫೆಯಿಂದ ಮಾತನಾಡುತ್ತಿದ್ದರು. ಆದರೆ ನಾನು ಜೀಪಿನಿಂದ ಇಳಿದು ಪಿ.ಎಸ್.ಐ ಶ್ರೀ ಭರತ್ ಕುಮಾರ್ ರವರ ಹತ್ತಿರ ಹೋದೆ, ಆದರೆ ಶ್ರೀ ಹಸನ್ ಇರ್ಷಾದ್ ರವರಿಗೆ ಹೊಡೆದಿಲ್ಲ.

<u>CROSS EXAMINATION:</u>

ಶ್ರೀ ಹಸನ್ ಇರ್ಷಾದ್ ಗುಡಾ ರವರು ಶ್ರೀ ಕುಬೇರ್ ಚನ್ನಬಸಪ್ಪ ಹೊಸುರ್ ಪಿಸಿ 754 ರವರಿಗೆ ನೀವು ನನಗೆ 2 ಸಲ ಲಾಠಿಯಿಂದ ಹೊಡೆದಿದ್ದೀರಾ ಅಥವಾ ಇಲ್ಲವಾ ಎಂದು ಕೇಳಿದ ಪ್ರಶ್ನೆಗೆ ಶ್ರೀ ಕುಬೇರ್ ಪಿಸಿ ರವರು ನಾನು ನಿಮಗೆ ಹೊಡೆದಿಲ್ಲವೆಂದು ಉತ್ತರಿಸಿದರು."

ದಿನಾಂಕ.02.03.2022 ರಂದು ಆಯೋಗದ ಮುಂದೆ ದೂರುದಾರರು ಹಾಜರಾಗಿ ತಮ್ಮ ಪಾಟೀ ಸವಾಲನ್ನು ನೀಡಿದ್ದು, ನೀಡಿರುವ ಪಾಟೀ ಸವಾಲು ಕೆಳಕಂಡಂತೆ ಇದೆ:

"As told by Shri Bharath Kumar that I was not wearing mask on 08-07-2020 in the evening when I was stopped by P.S.I., I have to say that I am an educated person and I know I should wear mask and I was wearing mask. At this point Shri Bharath Kumar, P.S.I. intervened and said for not wearing mask I had booked a case 98/2020 under section 269, 270, 336 of I.P.C.

Shri Muhammed Hassan Irshad at this point stated that the order for curfew timing 8 p.m. to 5 a.m. But this order is dated 29-06-2020 whereas Shri Bharath Kumar said that thereafter another dated 02-07-2020 was issued whereby curfew timing was 6.00 p.m. to 06.00 a.m.

On questioning P.S.I. that even if Shri Muhammed Hassan had violated the timing but he had gone to fetch medicine for his mother and that was permitted. So why did he assault Shri Muhammed Hassan, Shri Bharath Kumar stated that he did not show that he had gone for medicine and I had given only 2 hits by lathi.

To the statement given by Shri Bharath Kumar that Shri Muhammed Hassan had fell down from the motor cycle, Shri Muhammed Hassan stated that he never fell down. On the contrary, I was first hit by Shri Kubera P.C. on my left thigh and thereafter Shri Bharath Kumar came and hit me from behind continuously till I could not tolerate and sat on the ground. My medical report sustain my statement.

To Shri Bharath Kumar's statement that at the police station Shri Muhammed Ansar had spoken abusively, Shri Muhammed Hassan said that it is not correct and the police refused to take his case and instead pushed us out and thereafter Shri Bharath Kumar appeared there along with lathi and abused us."

ದಿನಾಂಕ.23.05.2022 ರಂದು ಅಂದಿನ ಎ.ಎಸ್.ಪಿ ಭಟ್ಕಲ್ ಶ್ರೀ ನಿಖಿಲ್ ಬಿ, ಹಾಲಿ ಪೊಲೀಸ್ ಅಧೀಕ್ಷಕರು, ರಾಯಚೂರು, ಶ್ರೀ ದಿವಾಕರ್ ಪಿ.ಎಂ ಪೊಲೀಸ್ ನಿರೀಕ್ಷಕರು, ಭಟ್ಕಳ್ ಟೌನ್ ಪೊಲೀಸ್ ಠಾಣೆ, ಶ್ರೀ ಭರತ್‌ಕುಮಾರ್ ಪಿ.ಎಸ್.ಐ ಭಟ್ಕಳ್ ಗ್ರಾಮಾಂತರ ಪೊಲೀಸ್ ಠಾಣೆ ಹಾಗೂ ದೂರುದಾರರು ಆಯೋಗದ ಮುಂದೆ ಹಾಜರಾಗಿ, ಎ.ಎಸ್.ಪಿ ಭಟ್ಕಲ್ ಶ್ರೀ ನಿಖಿಲ್ ಬಿ, ಹಾಲಿ ಪೊಲೀಸ್ ಅಧೀಕ್ಷಕರು, ರಾಯಚೂರು ಹಾಗೂ ಶ್ರೀ ದಿವಾಕರ್ ಪಿ.ಎಂ ಪೊಲೀಸ್ ನಿರೀಕ್ಷಕರು, ಭಟ್ಕಳ್ ಟೌನ್ ಪೊಲೀಸ್ ಠಾಣೆ ರವರು ತಮ್ಮ ಹೇಳಿಕೆಗಳನ್ನು ನೀಡಿರುತ್ತಾರೆ ಹಾಗೂ ದೂರುದಾರರಾದ ಶ್ರೀ ಮೊಹಮ್ಮದ್ ಹಸನ್ ಇರ್ಷಾದ್ ಗೂಡಾ ತನ್ನ ಮುಂದುವರೆದ ಹೇಳಿಕೆಯನ್ನು ನೀಡಿರುತ್ತಾರೆ.

ದಿನಾಂಕ.23.05.2022 ರಂದು ಆಯೋಗದ ಮುಂದೆ ಎ.ಎಸ್.ಪಿ ಭಟ್ಕಲ್ ಶ್ರೀ ನಿಖಿಲ್ ಬಿ, ಹಾಲಿ ಪೊಲೀಸ್ ಅಧೀಕ್ಷಕರು, ರಾಯಚೂರು ರವರು ನೀಡಿರುವ ಹೇಳಿಕೆಯು ಕೆಳಕಂಡಂತೆ ಇದೆ:

"I have worked as A.S.P. Batkal from 05th September 2019 to 31st December 2020.
I have heard the statement given by Shri Muhammed Hassan Irshad Guda about the incident dated 08-07-2020. I would like to state that I received a call from C.P.I. Bhatkal explaining the situation in the station. It was told that Shri Muhammed Hassan Irshad Guda alongwith Shri Muhammed Ansar had come to police station and was creating a ruckus. I immediately rushed to my office which is on the 1st Floor of Bhatkal Town police station and called Shri Muhammed Hassan Irshad Guda and Shri Mudammed Ansar to come to my office. Shri Mudammed Ansar stated that his brother-in-law was beaten up by PSI Shri Bharath Kumar and his driver Shri Kuber. Shri Shri Muhammed Hassan Irshad Guda later showed his bleeding thumb and blood clotted thigh. They demanded immediate action against Shri Kuber and P.S.I. Shri Bharath Kumar. I told them that I would look into the matter and enquire about it. I never told Shri Muhammed Hassan Irshad Guda to compromise in the matter."

ದಿನಾಂಕ.23.05.2022 ರಂದು ಆಯೋಗದ ಮುಂದೆ ಶ್ರೀ ದಿವಾಕರ್ ಪಿ.ಎಂ ಪೊಲೀಸ್ ನಿರೀಕ್ಷಕರು, ಭಟ್ಕಳ್ ಟೌನ್ ಪೊಲೀಸ್ ಠಾಣೆ, ರವರು ಹಾಜರಾಗಿ ತಮ್ಮ ಹೇಳಿಕೆಯನ್ನು ನೀಡಿರುತ್ತಾರೆ:

"ನಾನು ದಿನಾಂಕ.26.05.2020 ರಿಂದ ದಿನಾಂಕ.18.10.2021ರವರೆಗೆ ಭಟ್ಕಳ ವೃತ್ತ ನಿರೀಕ್ಷಕರಾಗಿ ಕಾರ್ಯ ನಿರ್ವಹಿಸಿದ್ದೇನೆ. ಪ್ರಸ್ತುತ ದಿನಾಂಕ.18.10.2021 ರಿಂದ ಇವತ್ತಿನವರೆಗೆ ಭಟ್ಕಳ್ ನಗರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನಾನು ದಿನಾಂಕ.09.02.2021 ರಂದು ಡಿವೈ ಎಸ್.ಪಿ ಶ್ರೀ ಕೆ.ಇ ಕೇಶವ್, ಕರ್ನಾಟಕ ಮಾನವ ಹಕ್ಕುಗಳ ಆಯೋಗ, ಬೆಂಗಳೂರು ರವರ ಮುಂದೆ ನನ್ನ ಹೇಳಿಕೆ ಕೊಟ್ಟಿರುತ್ತೇನೆ.

ಭಟ್ಕಳ ಪೊಲೀಸ್ ವೃತ್ತ ನಿರೀಕ್ಷಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾಗ, ನನ್ನ ವೃತ್ತದಲ್ಲಿ ಭಟ್ಕಳ ಶಹರ ಠಾಣೆಯು ನನ್ನ ವ್ಯಾಪ್ತಿಗೆ ಬರುತ್ತಿದ್ದು, ಶಹರ ಠಾಣೆಯ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದ ಶ್ರೀ ಭರತ್ ಕುಮಾರ್.ವಿ ಪಿ.ಎಸ್.ಐ ಹಾಗೂ ಜೀಪ್ ಚಾಲಕರಾದ ಶ್ರೀ ಕುಬೇರ್ ಹೊಸೂರ್ ರವರು ಅರ್ಜಿದಾರರಾದ ಶ್ರೀ ಮೊಹಮ್ಮದ್ ಇರ್ಷಾದ್ ಗುಡಾ ರವರ ಮೇಲೆ ಹಲ್ಲೆ ಮಾಡಿರುವ ಬಗ್ಗೆ ನನ್ನ ಗಮನಕ್ಕೆ ಬಂದ ಮಾಹಿತಿ ಮೇರೆಗೆ ಹಾಗೂ ಅರ್ಜಿದಾರರು ಕುಂದಾಪುರದ ಚಿನ್ಮಯಿ ಆಸ್ಪತ್ರೆಯಲ್ಲಿ

ಒಳರೋಗಿಯಾಗಿ ದಾಖಲಾಗಿ ಎಂ.ಎಲ್.ಸಿ ಆಗಿರುವ ಬಗ್ಗೆ ಮಾನ್ಯ ಮೇಲಾಧಿಕಾರಿಗಳಿಗೆ ತಿಳಿಸಿದಾಗ, ಮಾನ್ಯ ಮೇಲಾಧಿಕಾರಿಗಳು ಮೌಖಿಕವಾಗಿ ಚಿನ್ಮಯಿ ಆಸ್ಪತ್ರೆಗೆ ಭೇಟಿ ನೀಡಿ ಗಾಯಾಳುವನ್ನು ವಿಚಾರಣೆ ಮಾಡಲು ಆದೇಶ ಮಾಡಿರುತ್ತಾರೆ. ಅದರಂತೆ ನಾನು ಚಿನ್ಮಯಿ ಆಸ್ಪತ್ರೆಗೆ ಭೇಟಿ ನೀಡಿ, ಗಾಯಾಳುವನ್ನು ವಿಚಾರಣೆ ಮಾಡಿ, ಗಾಯಾಳುವಾದ ಶ್ರೀ ಮೊಹಮ್ಮದ್ ಇರ್ಷಾದ್ ಗುಡಾ ರವರು ಹೇಳಿದ ಪ್ರಕಾರವೇ ಅವರ ಸಂಬಂಧಿಕರು ಇಂಗ್ಲೀಷ್ ಭಾಷೆಯಲ್ಲಿ ಬರೆದು ಕೊಟ್ಟ ಅರ್ಜಿಯನ್ನು ಸ್ವೀಕರಿಸಿದ್ದೇನೆ. ಈ ಅರ್ಜಿಯ ವಿಚಾರಣೆ ಮಾಡುತ್ತಿದ್ದ ವೇಳೆಯಲ್ಲಿ ಮಾನ್ಯ ಎ.ಎಸ್.ಪಿ ಸಾಹೇಬರು, ಭಟ್ಕಳ ರವರು ಇದೇ ವಿಚಾರವಾಗಿ ಮೇಲಾಧಿಕಾರಿಗಳಿಂದ ಬಂದ ಅರ್ಜಿಯನ್ನು ವಿಚಾರಣೆ ಮಾಡುತ್ತಿದ್ದು, ಎರಡೂ ಅರ್ಜಿಯ ವಿಷಯವು ಒಂದೇ ಘಟನೆಗೆ ಸಂಬಂಧಪಟ್ಟಿದ್ದು, ಆದಕಾರಣ ಮಾನ್ಯ ಎ.ಎಸ್.ಪಿ ಸಾಹೇಬರು ಸಂಬಂಧಪಟ್ಟ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಹೇಳಿಕೆಯನ್ನು ಪಡೆದು ಕೊಂಡು ವಿಚಾರಣೆ ಮಾಡಿರುತ್ತಾರೆ.

ಮಾನ್ಯ ಎ.ಎಸ್.ಪಿ ಸಾಹೇಬರು ಘಟನೆಯ ಬಗ್ಗೆ ವಿಚಾರ ಮಾಡಿದ ಕುರಿತು ಅರ್ಜಿದಾರರಿಗೆ ಹಿಂಬರಹ ನೀಡಲು ತಿಳಿಸಿರುವಂತೆ, ಅರ್ಜಿದಾರರಾದ ಶ್ರೀ ಮೊಹಮ್ಮದ್ ಇರ್ಷಾದ್ ಗುಡಾ ರವರನ್ನು ಭೇಟಿಯಾಗಿ ಹಿಂಬರಹ ನೀಡಲು ಹೋದಾಗ ಅರ್ಜಿದಾರರು ಹಿಂಬರಹವನ್ನು ಸ್ವೀಕರಿಸಲು ನಿರಾಕರಿಸಿದ್ದಾರೆ.

ಅರ್ಜಿದಾರರಾದ ಶ್ರೀ ಮೊಹಮ್ಮದ್ ಇರ್ಷಾದ್ ಗುಡಾ ರವರು ದಿನಾಂಕ. 10.07.2020 ರಂದು ನೀಡಿದ ದೂರನ್ನು ಸ್ವೀಕರಿಸಿದ ಮೇಲೆ, ಈ ಕುರಿತು ಒಂದು ಕೇಸನ್ನು ದಾಖಲು ಮಾಡಬೇಕಾಗಿತ್ತೆಂದು ಮಾನ್ಯ ಆಯೋಗವು ಪ್ರಶ್ನಿಸಿದಾಗ, ಅದಕ್ಕೆ ಪೊಲೀಸ್ ನಿರೀಕ್ಷಕರಾದ ಶ್ರೀ ದಿವಾಕರ್ ಪಿ.ಎಂ ರವರು ಹೌದು ಕೇಸ್ ದಾಖಲಿಸಬೇಕಾಗಿತ್ತು ಎಂದು ಉತ್ತರಿಸಿದ್ದಾರೆ."

ದಿನಾಂಕ.23.05.2022 ರಂದು ಆಯೋಗದ ಮುಂದೆ ದೂರುದಾರರು ತಮ್ಮ ಮುಂದುವರೆದ ಹೇಳಿಕೆಯನ್ನು ನೀಡಿರುತ್ತಾರೆ:

"With regard to the statement I had given before the Enquiry Officer of K.S.H.R.C. on 18-01-2021 saying that when I approached the Dy.S.P. Shri Nikhil on that day he told me to compromise the matter, I would like to further state that the Dy.S.P. Shri Nikhil did not ask me to compromise. He only said that he will look into and enquire the matter."

ದೂರು, ಮನವಿ, ಪೊಲೀಸ್ ಅಧೀಕ್ಷಕರು, ಉತ್ತರ ಕನ್ನಡ ಜಿಲ್ಲೆರವರ ವರದಿ, ಆಯೋಗದ ಡಿವೈ.ಎಸ್.ಪಿ ಹಾಗೂ ಅದರೊಂದಿಗೆ ಸಲ್ಲಿಸಿರುವ ಅಡಕಗಳು ಹಾಗೂ ಅಭಿಪ್ರಾಯವನ್ನು

ಪರಿಶೀಲಿಸಲಾಗಿ, ದೂರುದಾರರಾದ ಶ್ರೀ ಮೊಹಮ್ಮದ್ ಹಸನ್ ಇರ್ಷಾದ್ ಗೂಡಾ ರವರಿಗೆ ದಿನಾಂಕ 08.07.2020ರಂದು ರಾತ್ರಿ 7:30 ಗಂಟೆಗೆ ಶ್ರೀ ಕುಬೇರ್ ಚನ್ನಬಸಪ್ಪ ಹೊಸುರ್ ಪಿಸಿ 754 ರವರು ಮನೆಗೆ ಹೋಗುವಂತೆ ದೂರುದಾರರಿಗೆ ಹೊಡೆದಿದ್ದು ಹಾಗೂ ಮತ್ತೊಂದು ಕಡೆಯಿಂದ ಪಿ.ಎಸ್.ಐ ಶ್ರೀ ಭರತ್‌ಕುಮಾರ್ ರವರು ಯಾವುದೇ ಕಾರಣ ಇಲ್ಲದೇ ದೂರುದಾರರನ್ನು ರಕ್ತಸ್ರಾವವಾಗುವಂತೆ ಅಮಾನವೀಯವಾಗಿ ಲಾಠಿಯಿಂದ ಹೊಡೆದಿರುವುದು ದೂರುದಾರರ ಹೇಳಿಕೆಯಿಂದ ಹಾಗೂ ಸಮುದಾಯ ಆರೋಗ್ಯ ಕೇಂದ್ರ, ಶಿರಾಲಿ ಆಸ್ಪತ್ರೆಯಲ್ಲಿ ಹೊರರೋಗಿಯಾಗಿ ಚಿಕಿತ್ಸೆ ಪಡೆದುಕೊಂಡ ಚೀಟಿಯಲ್ಲಿ, ಚಿನ್ಮಯಿ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿರುವುದು ಕೇಸ್‌ಶೀಟ್ ನಲ್ಲಿ ಹಾಗೂ ಪಿ.ಎಸ್.ಐ ಶ್ರೀ ಭರತ್ ಕುಮಾರ್ ವಿ ರವರ ಹೇಳಿಕೆಯಲ್ಲಿ, ಆತನು ದೂರುದಾರರಿಗೆ ಎರಡು ಏಟು ಹೊಡೆದಿದ್ದೇನೆಂದು ಒಪ್ಪಿಕೊಂಡಿರುವುದು ಕಂಡು ಬಂದಿರುತ್ತದೆ.

ದೂರುದಾರರು ದಿನಾಂಕ.08.07.2020ರಂದು ನಡೆದ ಹಲ್ಲೆಯ ಬಗ್ಗೆ, ದಿನಾಂಕ 10-07-2020 ರಂದು ಸಿ.ಪಿ.ಐ ಭಟ್ಕಳ್/ಪಿ.ಎಸ್.ಐ ಭಟ್ಕಳ್ ಟೌನ್/ಗ್ರಾಮಾಂತರ ಪೊಲೀಸ್ ಠಾಣೆಗೆ ನೀಡಿದ ದೂರನ್ನು ಸಿ.ಪಿ.ಐ ಶ್ರೀ ದಿವಾಕರ್ ರವರೇ ದೂರರ್ಜಿಯನ್ನು ಸ್ವೀಕರಿಸಿದ್ದು, ಯಾವುದೇ ಕೇಸ್ ದಾಖಲು ಮಾಡದೇ ಇರುವುದು ಸಿ.ಪಿ.ಐ ಶ್ರೀ ದಿವಾಕರ್ ರವರ ಹೇಳಿಕೆಯಿಂದ ಕಂಡು ಬಂದಿರುತ್ತದೆ.

ಈ ಮೇಲ್ಕಂಡ ಕಾರಣಗಳಿಂದ, ಕೆಳಕಂಡಂತೆ ಶಿಫಾರಸ್ಸು ಮಾಡಲಾಗಿದೆ:

ದೂರರ್ಜಿದಾರರಾದ ಶ್ರೀ ಮೊಹಮ್ಮದ್ ಹಸನ್ ಇರ್ಷಾದ್ ಗೂಡ ರವರಿಗೆ ರೂ. 50,000/- (ಐವತ್ತು ಸಾವಿರ ರೂಪಾಯಿಗಳು ಮಾತ್ರ) ಗಳನ್ನು ಪರಿಹಾರ ರೂಪದಲ್ಲಿ ಜರೂರಾಗಿ ಸರ್ಕಾರದಿಂದ ನೀಡಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಒಳಾಡಳಿತ ಇಲಾಖೆ, ವಿಧಾನ ಸೌಧ, ಬೆಂಗಳೂರು ಇವರಿಗೆ ಶಿಫಾರಸ್ಸು ಮಾಡಲಾಗಿದೆ ಮತ್ತು ಈ ಪ್ರಕರಣದ ಘಟನೆಯ ಬಗ್ಗೆ ಪಿ.ಎಸ್.ಐ ಶ್ರೀ ಭರತ್ ಕುಮಾರ್. ವಿ ಭಟ್ಕಳ ಗ್ರಾಮಾಂತರ ಪೊಲೀಸ್ ಠಾಣೆ ಹಾಗೂ ಅಂದಿನ ಪಿ.ಸಿ-754 ಶ್ರೀ ಕುಬೇರ ಚನ್ನಬಸಪ್ಪ ಹೊಸೂರ್, ಹಳಿಯಾಳ ಪೊಲೀಸ್ ಠಾಣೆ ರವರ ಮೇಲೆ ಕೆಎಸ್‌ಪಿ (ಡಿಪಿ) ನಿಯಾಮವಳಿ 1965 ರ ಅನ್ವಯ ಇಲಾಖಾ ವಿಚಾರಣೆ ಮಾಡಿ, ಅಗತ್ಯ ಕ್ರಮ ವಿಧಿಸುವಂತೆ ಶಿಫಾರಸ್ಸು ಮಾಡಲಾಗಿದೆ. ನಂತರ ವಿಚಾರಣೆಯ ತೀರ್ಪಿಗೊಳಪಟ್ಟ ಶ್ರೀ ಭರತ್ ಕುಮಾರ್. ವಿ ಭಟ್ಕಳ ಗ್ರಾಮಾಂತರ ಪೊಲೀಸ್ ಠಾಣೆ ಹಾಗೂ ಅಂದಿನ ಪಿ.ಸಿ-754 ಶ್ರೀ ಕುಬೇರ ಚನ್ನಬಸಪ್ಪ ಹೊಸೂರ್, ಹಳಿಯಾಳ ಪೊಲೀಸ್ ಠಾಣೆ ರವರ ವೇತನದಿಂದ ಪರಿಹಾರ ನೀಡಿದ ಹಣವನ್ನು ವಸೂಲಿ ಮಾಡಿಕೊಳ್ಳುವ ಬಗ್ಗೆ ಪರಿಶೀಲಿಸತಕ್ಕದ್ದು.

ಶ್ರೀ ದಿವಾಕರ್ ಅಂದಿನ ಸಿ.ಪಿ.ಐ, ಹಾಲಿ ಪಿ.ಐ, ಭಟ್ಕಳ ನಗರ ಪೊಲೀಸ್ ಠಾಣೆ ರವರು ದೂರುದಾರರು ನೀಡಿದ ದೂರರ್ಜಿಯನ್ನು ಸ್ವೀಕರಿಸಿ ಪ್ರಕರಣವನ್ನು ದಾಖಲು ಮಾಡದೇ ಕರ್ತವ್ಯಲೋಪವೆಸಗಿರುವುದು ಕಂಡು ಬಂದ ಕಾರಣ ಶ್ರೀ ದಿವಾಕರ್ ರವರ ಮೇಲೆ ಸೂಕ್ತ ಕ್ರಮ ಜರುಗಿಸಲು ಶಿಫಾರಸ್ಸು ಮಾಡಲಾಗಿದೆ.

ಆದೇಶದ ಪ್ರತಿಯನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಒಳಾಡಳಿತ ಇಲಾಖೆ, ವಿಧಾನ ಸೌಧ, ಬೆಂಗಳೂರು ಹಾಗೂ *ಪೊಲೀಸ್ ಮಹಾ ನಿರ್ದೇಶಕರು ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಬೆಂಗಳೂರು* ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸುವುದು.

ಮೇಲ್ಕಂಡ ಶಿಫಾರಸ್ಸನ್ನು ಮಾನವ ಹಕ್ಕುಗಳ ರಕ್ಷಣಾ ಅಧಿನಿಯಮ 1993, ಕಲಂ 18(ಇ) ಪ್ರಕಾರ ಶಿಫಾರಸ್ಸಿನ ಪ್ರತಿ ತಲುಪಿದ ಒಂದು ತಿಂಗಳ ಒಳಗಾಗಿ ಅನುಪಾಲನಾ ವರದಿಯನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಒಳಾಡಳಿತ ಇಲಾಖೆ, ವಿಧಾನ ಸೌಧ, ಬೆಂಗಳೂರು ಹಾಗೂ ಪೊಲೀಸ್ ಮಹಾ ನಿರ್ದೇಶಕರು ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಬೆಂಗಳೂರು ರವರು ಆಯೋಗಕ್ಕೆ ಸಲ್ಲಿಸತಕ್ಕದ್ದು.

ಮುಂದುವರೆದು, ಶಿಫಾರಸ್ಸಿನಿಂದ ಬಾಧಿತರಾದ ಪೊಲೀಸ್ ಸಿಬ್ಬಂದಿರವರು ನಿಯಮ 22 ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ (ಪ್ರಕ್ರಿಯೆ) ನಿಯಮಾವಳಿ 2020 ರಂತೆ ಅಭಿಪ್ರಾಯ/ಶಿಫಾರಸ್ಸನ್ನು ತಿದ್ದುಪಡಿಗೆ ಅಥವಾ ಮರು ಪರಿಶೀಲನೆಗೆ ಅರ್ಜಿಯನ್ನು ಆಯೋಗಕ್ಕೆ ಸಲ್ಲಿಸಿದರೆ ಅದನ್ನು ನಿಯಮಾನುಸಾರ ಪರಿಶೀಲನೆ ಮಾಡಲಾಗುವುದೆಂದು ಅಭಿಪ್ರಾಯ/ಶಿಫಾರಸ್ಸು ಮಾಡಲಾಗಿದೆ.

ಪ್ರಕರಣವನ್ನು ದಿನಾಂಕ: 29.08.2022 ರಂದು ಅನುಪಾಲನಾ ವರದಿಗಾಗಿ ಮಂಡಿಸುವುದು.

Sd/-
(ಆರ್.ಕೆ ದತ್ತ)
ಸದಸ್ಯರು

ಜಿ.ಎಸ್.